**ಓ.ಎಸ್ 115/2017**
**ಪಿ.ಡಬ್ಲೂ-1**

ದಿನಾಂಕಃ**02.08.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಬಿ.ಎಸ್.ವೈ ವಕೀಲರಿಂದಃ**

ನ್ಯಾಯಾಲಯದಲ್ಲಿ ಹಾಜರುಡಿಪಸಿದಂತಹ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನನ್ನ ಮದುವೆ ಆಗಿ 45 ವರ್ಷ ಆಗಿರುತ್ತದೆ. ಸ.ನಂ.28 ಕಟ್ಟೆಮಳಲವಾಡಿ ನಾಲಾ 1 ಎಕರೆ 28 ಗುಂಟೆ ಜಮೀನನ್ನು ನನ್ನ ಮದುವೆಗಾಗಿ ನನ್ನ ತಂದೆ ಹಾಗೂ ಪ್ರತಿವಾದಿಗಳೆಲ್ಲಾ ಸೇರಿ ಪುಟ್ಟಣಯ್ಯರವರಿಗೆ ಬಿನ್ ಜವರಪ್ಪ ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ. ಸದರಿ ಸ.ನಂ. ಜಮೀನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸ.ನಂ.75/2 ರ ಕಟ್ಟೆಮಳಲವಾಡಿ ಜಮೀನನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ತೊಂಡಾಳು ಗ್ರಾಮದಲ್ಲಿ ನನಗೆ ನಮ್ಮ ತಂದೆಯವರಿಗೆ ಸೇರಿದಂತಹ ಎರಡು ಮನೆ ಮತ್ತು ಬ್ಯಾರನ್ ಇರುತ್ತದೆಂದರೆ ಸರಿ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ದಿಃ08.04.2011 ರಲ್ಲಿ ನಾನು ನನ್ನ ಅಣ್ಣ-ತಮ್ಮಂದಿರು ಎಲ್ಲಾ ಸೇರಿ ಪಂಚಾಯಿತಿ ಪಾಲುಪಾರಿಕತ್ತು ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ಸದರಿ ಪಾಲು ಪಾರಿಕತ್ತಗೆ ನಾನು ಇನ್ನೂಳಿದ ವಾದಿಗಳು ಮತ್ತು ಪ್ರತಿವಾದಿಗಳು ಸಹಿ ಮಾಡಿರುತ್ತೇವೆಂದರೆ ಸುಳ್ಳು.

ಶಿರೂರು ನಾಲಾ 1995 ರಲ್ಲಿ ಸ.ನಂ.8/2 ರಲ್ಲಿ 1 ಎಕರೆ ಭೂಮಿಯನ್ನು ದೊಡ್ಡಸ್ವಾಮಿರವರಿಗೆ ಮತ್ತು ಹುಚ್ಚೇಗೌಡರವರ ಮಗನಿಗೆ 1 ಎಕರೆ 3 ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆಂದರೆ ಸರಿ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ದಾವಾ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. 1 ನೇ ವಾದಿ ಮೈಸೂರಿನಲ್ಲಿ ವಾಸವಿದ್ದು ಅವರ ಗಂಡ ಪೇಪರ್ ಕಾರ್ಖಾನೆಯಲ್ಲಿ ಉದ್ಯೋಗ ಮಾಡುತ್ತಿದ್ದರು. 2 ನೇ ಬೆಂಗಳೂರಿನಲ್ಲಿ ವಾಸ, ವಾದಿಯ ಗಂಡ ಐ.ಟಿಐ ಉದ್ಯೋಗಿ. ನಾನು ನಂಜಾಪುರ ಗ್ರಾಮದಲ್ಲಿ ವಾಸ ನನ್ನ ಗಂಡ ವ್ಯವಸಾಯ ಮಾಡುತ್ತಾರೆ. 4 ನೇ ಚಾಮರಾಜನಗರದಲ್ಲಿ

ವಾಸ, ಅವರ ಗಂಡ ಮರಣ ಹೊಂದಿರುತ್ತಾರೆ. ಅವರು ಕಾರಿನ ಚಾಲಕರಾಗಿದ್ದರು. ದಾವೆಯಲ್ಲಿ ನನ್ನ ಮತ್ತು ಇನ್ನೂಳಿದ ವಾದಿಗಳ ವಿಳಾಸ ಏನು ನಮೂದು ಇರುತ್ತದೆಂದರೆ ವಾಸವಿರುವ ಸ್ಥಳದ ಹೆಸರನ್ನು ಬರೆಸಿರುವುದಿಲ್ಲ. 1 ನೇ ವಾದಿ ಹೇಳಿಕೆಯ ಮೇರೆಗೆ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆಂದರೆ ಸರಿಯಲ್ಲ. ಸದರಿಯವರ ಪ್ರಚೋದನೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಯಾವುದೇ ವಿಚರ ಗೊತ್ತಿಲ್ಲದೇ ಈ ದಾವೆಯನ್ನು ಹೂಡಿರುತ್ತೇನೆಂದರೆ ಸರಿಯಲ್ಲ. ನಮ್ಮ ಮದುವೆಯ ಸಮಯದಲ್ಲಿ ನಮಗೆ ನೀಡಬೇಕಾದ ಭಾಶಃಕ್ಕಿಂತ ಹೆಚ್ಚಿನ ಪರಿಹಾರ ಕೊಟ್ಟು ಮದುವೆ ಮಾಡಿರುತ್ತಾರೆಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.